ಮಾತಿಗೆ ಸೋತರು. ಗಂಗೆಯ ಮೇಲಿನ ಶ್ರದ್ಧೆ, ಭಕ್ತಿಗಳು ಮಣಿಸಿದವು. ಇಂತಹ ಕಟ್ಟಾ ಸಂಪ್ರದಾಯಸ್ಥರು, ಭಗವತಿಗೆ ಅರ್ಚಕರಾಗಿ ಸೇವೆ ಸಲ್ಲಿಸಬೇಕಾಗಿ ಒದಗಿ ಬಂದದ್ದು ದೈವ ರಹಸ್ಯ ! ಇವರ ಮೂಲಕವೇ ಅಂದಿನ ಸಾಮಾಜಿಕ ಪರಿವರ್ತನೆಗೆ ತಯಾರು ಮಾಡಿದಳು ಭವತಾರಿಣಿ! ದೇವರು, ಧರ್ಮದ ಮರ್ಮವರಿತರು, ಅನುಷ್ಠಾನಕ್ಕೆ ತಂದರು.

ಶಾರದಾದೇವಿಯವರು 'ಪತಿಗೆ ತಕ್ಕ ಸತಿ'ಯ ವ್ರತದಲ್ಲಿಯೇ ಸಾಗಿ ಬಂದರು. ದಕ್ಷಿಣೇಶ್ವರದಲ್ಲಿ ಅನುಷ್ಠಾನಕ್ಕೆ ತಂದುಕೊಂಡು, ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಜಯರಾಂಬಾಟಿಯಲ್ಲಿ ಸಂಪ್ರದಾಯಸ್ಥ ಕುಟುಂಬದವರ ಜೊತೆಯಲ್ಲಿ ಇದ್ದರೂ, ಜಾತಿ, ಮತಗಳ ಭೇದವೆಣಿಸಲಿಲ್ಲ. ಅಮ್ಜದನಿಗೂ ಹತ್ತಿರ ಕುಳಿತು ಉಣಬಡಿಸಿದರು, ಮೀನು ಮಾರಾಟಗಾರ್ತಿಯ ವಮನವನ್ನೂ ಬಳಿದರು. ಕಜ್ಜಿ, ತುರಿಯ ಬಾಲಕನಿಗೆ ತಾವೇ ಔಷಧಿ ತಯಾರಿಸಿ, ಮೈಗೆ ಹಚ್ಚಿ ಸ್ನಾನ ಮಾಡಿಸಿದರು. ಮಂತ್ರದೀಕ್ಷೆಗೂ ಸೈ, ಸಂನ್ಯಾಸ ದೀಕ್ಷೆಗೂ ಸೈ ಎನಿಸಿದರು. ಅಸಾಮಾನ್ಯರಾದ್ದರಿಂದಲೇ ಶ್ರೀರಾಮಕೃಷ್ಣರು ಭಗವತಿಯ ಸ್ಥಾನದಲ್ಲಿ ಸ್ಥಾಪಿಸಿ ಪೂಜಿಸಿ, ತಮ್ಮೆಲ್ಲ ತಪಸ್ಸಿನ ಫಲವನ್ನು ಸಮರ್ಪಿಸಿ 'ಜಗನ್ಮಾತೆ'ಯ ಪಟ್ಟಕ್ಕೇರಿಸಿದರು! ತಾಯಿ ಸರ್ವಮಾನ್ಯೆ, ಭೇದರಹಿತಳು, ಜಗತ್ತಿನ ಹಿತೈಷಿ! ಸತ್ಯನಿಷ್ಠುರತೆಯೆನ್ನುವುದು ಇದಕ್ಕಾಗಿ!

ಸ್ವಾಮಿ ವಿವೇಕಾನಂದರು ಆಧುನಿಕತೆಯ ವಾತಾವರಣದಲ್ಲಿ ಬೆಳೆದಿದ್ದರೂ ಜ್ಞಾನದಾಹಿಗಳಾಗಿ ಸಾಕಷ್ಟು ಅಧ್ಯಯನ ಮಾಡಿದ್ದರೂ ನಿರ್ದಿಷ್ಟ ಗುರಿಗೆ ತಲುಪಲಾಗಿರಲಿಲ್ಲ. ಶ್ರೀರಾಮಕೃಷ್ಣರ ಸಹವಾಸದಲ್ಲಿ ತಮ್ಮ ಸಂದೇಹಗಳನ್ನೆಲ್ಲಾ ಪರಿಹರಿಸಿಕೊಂಡು, ಮಾನವೀಯತೆಯತ್ತ ವಿಶೇಷ ಗಮನ ಹರಿಸಿ, ಸನಾತನ ಧರ್ಮದ ತಿರುಳನ್ನು ಅನುಷ್ಠಾನಕ್ಕೆ ತಂದರು. ಸಮಾಜಕಲ್ಯಾಣಕ್ಕಾಗಿ ಬದುಕನ್ನು ಮೀಸಲಿರಿಸಿದರು. 'ರಾಷ್ಟ್ರಪ್ರೇಮ' ಬಾಯಿ ಮಾತಾಗಿರಲಿಲ್ಲ. ಹೊರದೇಶಗಳಲ್ಲಿ ಭಾರತದ ಮಹಿಮೆ-ಗರಿಮೆಗಳನ್ನು ಎತ್ತಿ ಹಿಡಿದರು. ಶ್ರೀರಾಮಕೃಷ್ಣರ 'ಧರ್ಮ-ದೇವರು'ಗಳ ವಿಶಾಲ ಅರ್ಥವನ್ನು ಜಗತ್ತಿಗೆ ಸಾರಿ ಕ್ರಾಂತಿಪುರುಷರಾದರು. ಸತ್ಯದ ಒಳ ಅರ್ಥವನ್ನು ಬಿತ್ತಿ ಸತ್ಯನಿಷ್ಠುರರಾದರು ಎನ್ನಲೇನಡ್ಡಿ ?

**ಲೋಕಹಿತೈಷಿಗಳು:** ಶ್ರೀರಾಮಕೃಷ್ಣರು ಸಾಧನೆ ತಪಸ್ಸಿನಿಂದ ಪಡೆದ, ಭವತಾರಿಣಿಯ ಸಾಕ್ಷಾತ್ಕಾರದ ಮೂಲಕ ದಿವ್ಯ ಮಂತ್ರಗಳು ಸಾಮಾಜಿಕ ಕ್ರಾಂತಿಯನ್ನೇ ಮಾಡಿದವು. ಧರ್ಮ-ಅಧರ್ಮಗಳ ಹೋರಾಟವನ್ನು ಹತ್ತಿಕ್ಕಿದವು. ಕೇವಲ ಕೊಲ್ಕತ್ತೆಯ ಜನರಿಗಾಗಿ ಅಲ್ಲ ಅವರ 'ವಚನವೇದ'. ವಿಶ್ವಕ್ಕೇ ಸಾರಬೇಕಾದ ಕೆಲಸ ಉಳಿದಿದೆ. ಶ್ರೀರಾಮಕೃಷ್ಣರು ಇದಕ್ಕೆ ಸೂಕ್ತ ವ್ಯಕ್ತಿಗಳಿಗೆ ವಹಿಸಿದರು.

ಶ್ರೀಕೃಷ್ಣನು ಧರ್ಮಸಂಸ್ಥಾಪನೆಗಾಗಿ ಅರ್ಜುನನ ಮೂಲಕ ನಡೆಸಬೇಕಾದ ಕಾರ್ಯಕ್ಕಾಗಿ ಕುರುಕ್ಷೇತ್ರದ ರಣರಂಗದಲ್ಲಿ ಭಗವದ್ಗೀತೆಯನ್ನು ಬೋಧಿಸಿದನಲ್ಲವೆ? ಆ ಬೋಧನೆ ವಿಶ್ವಕ್ಕೆ ತಲುಪಿದ್ದು ಸಂಜಯನು ಅಂಧ ಮಹಾರಾಜನಿಗೆ ಯಥಾವತ್ತಾಗಿ ಹೇಳಿದ್ದರಿಂದ. ಹಾಗೆಯೇ ಶ್ರೀರಾಮಕೃಷ್ಣರ ಸಂದೇಶಗಳು ತಲುಪಿದ್ದು ಶ್ರೀಮಾತೆ ಶಾರದಾದೇವಿಯವರು ಹಾಗೂ ಸ್ವಾಮಿ ವಿವೇಕಾನಂದರಿಂದ.

ಕಾಶಿಪುರದಲ್ಲಿ ಶ್ರೀರಾಮಕೃಷ್ಣರು ಕಾಯಿಲೆಯಿಂದ ನರಳುತ್ತಿದ್ದಾರೆ. ಶ್ರೀಮಾತೆಯವರು ಅವರ ಪಥ್ಯಪಾನಾದಿಗಳನ್ನು ನೋಡಿಕೊಳ್ಳುತ್ತಿದ್ದಾರೆ. ಒಂದು ದಿನ ಪಥ್ಯವನ್ನು ತಂದಿದ್ದಾರೆ. ಪತಿಯನ್ನು ಊಟಕ್ಕಾಗಿ ಎಬ್ಬಿಸುತ್ತಿದ್ದಾರೆ. ಶ್ರೀರಾಮಕೃಷ್ಣರು ಎಚ್ಚೆತ್ತರೂ, ಏನೋ ಚಿಂತೆಯಲ್ಲಿರುವಂತೆ ಕಂಡ ಶ್ರೀಮಾತೆಯವರು, 'ಏನೋ ಹೇಳಬೇಕೆಂದು ಇರುವಂತೆ ಕಾಣುತ್ತಿದೆ. ಏನು ಹೇಳಬೇಕೋ ಹೇಳಿ' ಎಂದು ಒತ್ತಾಯಿಸಿದಾಗ 'ಕೊಲ್ಕತ್ತೆಯ ಜನ ಕ್ರಿಮಿಕೀಟಗಳಿಗಿಂತ ಹೆಚ್ಚಾಗಿ ನೋವನ್ನು ಅನುಭವಿಸುತ್ತಿದ್ದಾರೆ. ನೀನೇನೂ ಮಾಡುವುದಿಲ್ಲವೆ?' ಎನ್ನುತ್ತಾರೆ. ಶ್ರೀಮಾತೆ, 'ನಾನೊಬ್ಬ ಹೆಂಗಸು. ನಾನೇನು ಮಾಡಬಲ್ಲೆ?' ಎಂದು ಸಹಜವಾಗಿ ಹೇಳಿದರು. 'ನಾನೊಬ್ಬನೇ ಎಲ್ಲ ಮಾಡಬೇಕೆ?' ಎಂದರು ಶ್ರೀರಾಮಕೃಷ್ಣರು. ಶ್ರೀಮಾತೆಯವರು 'ಮುಂದೆ ಏನಾಗಬೇಕೋ, ಆಗ ಅದು ತಾನಾಗಿಯೇ ಆಗುತ್ತದೆ' ಎಂದರು. ಬಹುಶಃ ಈ ಮಾತು ಶ್ರೀರಾಮಕೃಷ್ಣರಿಗೆ ಸಮಾಧಾನ ವಿತ್ತಿರಬಹುದು. ಇವರಿಬ್ಬರ ಈ ಪುಟ್ಟ ಸಂವಾದ ಲೋಕಕ್ಕೆ ಮಹತ್ತರವಾದ ಕೊಡುಗೆಯನ್ನೇ ನೀಡಿತು. ಶ್ರೀರಾಮಕೃಷ್ಣರ ಮಾತಿನ ಹಿನ್ನಲೆಯಲ್ಲಿ 'ಸತಿ'ಯ ಕರ್ತವ್ಯ ಜಾಗೃತವಾಗಿದ್ದಿರಬಹುದು. ಅವರ ಮಹಾಸಮಾಧಿಯ ನಂತರ ಶ್ರೀಮಾತೆಯವರು ಜಯರಾಂಬಾಟಿಯಲ್ಲಿ ಅನುಷ್ಠಾನಕ್ಕೆ ತಂದದ್ದು ಶ್ರೀರಾಮಕೃಷ್ಣರ ದಿವ್ಯ ಮಂತ್ರಗಳ ಸಂದೇಶವನ್ನು. ಲಜ್ಜಾಪಟಾವೃತೆಯಾದ ಸರಳರೂ, ಮಿತಭಾಷಿಗಳೂ ಆದ ಶ್ರೀಮಾತೆಯವರು, ಶ್ರೀರಾಮಕೃಷ್ಣರ ತಪಸ್ಸಿನ ಫಲವನ್ನು ಸ್ವೀಕರಿಸಿ 'ಜಗನ್ಮಾತೆ'ಯ ಸ್ಥಾನವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಲೋಕಹಿತಕ್ಕಾಗಿ ವ್ಯಯಿಸಿ ಪೂಜ್ಯರೆನಿಸಿದ್ದಾರೆ. 'ಪತಿಗೆ ತಕ್ಕ ಸತಿ'ಯಾಗಿ ಅವತಾರ ಕಾರ್ಯಕ್ಕೆ ನೆರವಾಗಿದ್ದಾರೆ. ಧರೆಗಿಳಿದು ಬಂದು ಶ್ರೀರಾಮಕೃಷ್ಣರ 'ಶಕ್ತಿ'ಯಾಗಿ ಭಾರತೀಯ ನಾರೀ ಸಂಸ್ಕೃತಿಯನ್ನು ಮೆರೆದ ದೈವೀ ಮಹಿಳೆ ಅವರು!

ಶ್ರೀರಾಮಕೃಷ್ಣರ ವಚನಾಮೃತವನ್ನು ಸವಿಯಲು ಎಲ್ಲಾ ವರ್ಗದ ಜನರೂ ಬರುತ್ತಿದ್ದರು. ಕೆಲವು ತರುಣರನ್ನು ವಿಶೇಷವಾಗಿ ತಮ್ಮತ್ತ ಪ್ರೀತಿಯಿಂದ ಸೆಳೆದರು. ಅವರ ಪೈಕಿ ನರೇಂದ್ರನಾಥ ಮೆಚ್ಚಿನ ಶಿಷ್ಯನಾಗಿದ್ದ. ಆಧುನಿಕತೆಯ ವಾತಾವರಣದಲ್ಲಿ ಬೆಳೆದ ಶ್ರೀಮಂತನಾಗಿದ್ದರೂ, ಸರಳತೆಯ ಕಡೆಗೇ ಒಲವಿದ್ದಿತು. ಜ್ಞಾನದಾಹಿಯಾಗಿ ಸಾಕಷ್ಟು ಅಧ್ಯಯನ ಮಾಡಿದ್ದರೂ ಒಂದು ನಿರ್ದಿಷ್ಟ ಗುರಿಯನ್ನು ತಲುಪಲಾಗಿರಲಿಲ್ಲ. ಶ್ರೀರಾಮಕೃಷ್ಣರ ಸಹವಾಸದಲ್ಲಿ ಸಂದೇಶ ಮುಕ್ತನಾಗಿ, ಮಾನವೀಯತೆಯುತ್ತ ಮುನ್ನಡೆದು, ಸನಾತನ ಧರ್ಮದ ತಿರುಳನ್ನು ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾದ, ಶ್ರೀರಾಮಕೃಷ್ಣರ ಆಪ್ತಶಿಷ್ಯರ ನೆಚ್ಚಿನ ನಾಯಕನೂ ಆಗಿದ್ದ.

ಲೋಕಹಿತೈಷಿಗಳಾದ ದಿವ್ಯತ್ರಯರು, ಲೋಕಕ್ಷೇಮಕ್ಕಾಗಿ ಸದಾ ಧ್ಯಾನಿಸುತ್ತಿರಬಹುದು ಎಂದು ಭಾವಿಸಬಹುದಲ್ಲವೆ? ಅಂತಹವರ ದರ್ಶನ, ಸಹವಾಸ, ಸದ್ಗ್ರಂಥಗಳು ಜಗತ್ತಿಗೇ ಸಂದೇಶ ನೀಡುತ್ತವೆ, ಸಾಧ್ಯವಾದ ಮಟ್ಟಿಗೆ ಬದುಕನ್ನು 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಕ್ಕಾಗಿ ಸವೆಸಿ ಧನ್ಯರಾಗಿ ಎಂದು. ದಿವ್ಯತ್ರಯರ ಸ್ಮರಣೆಯನ್ನು ಬರಹದ ಮೂಲಕ ಅರ್ಪಿಸುವ ಪ್ರೇರಣೆಯೂ ಸಹ ಪೂರ್ವಜನ್ಮದ ಸುಕೃತವೆನ್ನುತ್ತಾ ನಮಿಸುತ್ತೇನೆ. ✿